ಓ ಎಸ್ ನಂ.126/2017
ಪಿ ಡಬ್ಲ್ಯೂ: 1

**ದಿ:14.03.2023 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಶ್ರೀ ಆರ್.ಎಸ್.ಎಂ ವಕೀಲರಿಂದಃ**

ದಾವಾ ಸ್ವತ್ತನ್ನು ಜಯಮ್ಮ ಕೋಂ ದೊಡ್ಡಯ್ಯ ಎಂಬುವರು 2 ವರ್ಷಗಳಿಗೆ ಭೋಗ್ಯಕ್ಕೆ ಪಡೆದಿದ್ದರೂ ಎಂದರೆ ಸರಿ. ಜಯಮ್ಮನವರ ಬಳಿ ಭೋಗ್ಯಕ್ಕೆ ಪಡೆದ ಹಣವನ್ನು ಹಿಂತಿರುಗಿಸಲು, ಸಾಕಷ್ಟು ಹಣ ಇಲ್ಲದ ಕಾರಣ ನನ್ನನ್ನು ಪ್ರತಿವಾದಿಗೆ ಪರಿಚಯಿಸಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಅಳತೆ 2009 ನೇ ಇಸವಿಯ ಮನೆಯ ಭೋಗ್ಯದ ಕರಾರಿನಲ್ಲಿ ದಾವಾ ಸ್ವತ್ತಿನ ವಿಸ್ತೀರ್ಣವು 30 X 25 ಅಡಿಗಳು ಇರುತ್ತದೆ ಎಂದರೆ ಸರಿ. ಸದರಿ ಅಡಿಗಳನ್ನು ಮೀಟರ್ ಗಳಲ್ಲಿ ಪರಿವರ್ತಿಸಿದ್ದು 2016 ರ ಈ-ಸ್ವತ್ತಿನ ನಂತರ ಎಂದರೆ ಸರಿ. 2010 ರಿಂದ 2015 ನೇ ಇಸವಿಯವರೆಗೂ ದಾವಾ ಸ್ವತ್ತು 30 X 25 ಅಡಿಗಳಲ್ಲಿಯೇ ನಮೂದಾಗಿರುತ್ತದೆ ಎಂದರೆ ಸಾಕ್ಷಿಯು ನನಗೆ ಸರಿಯಾಗಿ ಹೇಳಲು ಬರುವುದಿಲ್ಲ, ಇರಬಹುದು, ನನ್ನ ವಕೀಲರಿಗೆ ಎಲ್ಲಾ ದಾಖಲೆಗಳನ್ನು ಕೊಟ್ಟಿರುತ್ತೇನೆ ಎಂದು ನುಡಿದಿರುತ್ತಾರೆ.

ನಾನು ವಿದ್ಯಾಭ್ಯಾಸ ಮಾಡಿರುವುದಿಲ್ಲ. ಕರಾರು ಪತ್ರ ಯಾವ ದಿನಾಂಕ, ತಿಂಗಳು, ವರ್ಷದಲ್ಲಿ ಆಗಿರುತ್ತದೆ ಎಂದು ಹೇಳಲು ನನಗೆ ಬರುವುದಿಲ್ಲ. ನಿ.ಪಿ-6 ರ ಪ್ರಕಾರ ದಾವಾ ಸ್ವತ್ತಿನ ಖಾತೆಯು ಪ್ರತಿವಾದಿಯಾದ ಸರೋಜಮ್ಮ ಮತ್ತು ಆಕೆಯ ಗಂಡನ ತಮ್ಮ ವೆಂಕಟೇಶ್‌ರವರ ಹೆಸರಿನಲ್ಲಿ ಜಂಟಿಯಾಗಿ ಇರುತ್ತದೆ ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿದಿರುತ್ತಾರೆ. ಸಧ್ಯ ವೆಂಕಟೇಶ್‌ರವರು ಕಾಲವಾಗಿರುತ್ತಾರೆ ಎಂದರೆ ಸರಿ. ವೆಂಕಟೇಶ್‌ರವರಿಗೆ ಒಂದು ಗಂಡು ಹಾಗೂ ಒಂದು ಹೆಣ್ಣು ಮಕ್ಕಳು ಇದ್ದಾರೆ ಎಂದರೆ ಸರಿ. ಸದರಿ ದಾವೆಯಲ್ಲಿ ವೆಂಕಟೇಶ್‌ರವರ ಮಕ್ಕಳನ್ನು ಪಕ್ಷಕಾರರನ್ನಾಗಿ ಸೇರಿಸಲು ಏನು ಸಮಸ್ಯೆ ಇರಲಿಲ್ಲ ಎಂದರೆ ಸರಿ. ಸದರಿ ದಾವಾ ಸ್ವತ್ತಿಗೆ ಸರೋಜಮ್ಮ ಮತ್ತು ವೆಂಕಟೇಶ್ ಇಬ್ಬರೂ ಮಾಲೀಕರು ಎಂದು ನಾನು ಕೊಟ್ಟಿರುವ ದಾಖಲೆಯಲ್ಲಿಯೇ ಇರುತ್ತದೆ ಎಂದರೆ ಸರಿ.

ನಿ.ಪಿ-1 ರ ಪ್ರಕಾರ ಮನೆಯ ಕ್ರಯದ ಕರಾರು ಪತ್ರವನ್ನು ಸರೋಜಮ್ಮರವರು ನನ್ನ ಹೆಸರಿಗೆ ಬರೆದುಕೊಡಲು ಛಾಪಾ ಕಾಗದವನ್ನು ತಂದಿರುತ್ತಾರೆ ಎಂದರೆ ಸರಿ. ಸದರಿ ಛಾಪಾ ಕಾಗದವನ್ನು ತಂದು

ನನಗೆ ಲಕ್ಕಿಹಳ್ಳಿಯಲಲ್ಲಿ ಕೊಟ್ಟರು ಎಂದರೆ ಸಾಕ್ಷಿಯು ಊರಿನ ಮುಖಂಡರ ಸಮಕ್ಷಮ ನನಗೆ ಹೊಸದುರ್ಗದಲ್ಲಿಯೇ ಕೊಟ್ಟಿರುತ್ತಾರೆ ಎಂದು ನುಡಿದಿರುತ್ತಾರೆ. ಛಾಪಾ ಕಾಗದವು ರೂ.100/- ಗಳದಾಗಿರುತ್ತದೆ. ಛಾಪಾ ಕಾಗದವನ್ನು ಭೋಗ್ಯದ ಹಣವನ್ನು ಹಿಂತಿರುಗಿಸುವ ಸಮಯದಲ್ಲಿ ಪ್ರತಿವಾದಿಯಾದ ಸರೋಜಮ್ಮನವರು ನನಗೆ ತಂದುಕೊಟ್ಟರು ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿಯೇ ಅಂದಿನಿಂದಲೂ ಇಂದಿನವರೆಗೂ ನಾನು ಭೋಗ್ಯದಲ್ಲಿ ಇರುತ್ತೇನೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಛಾಪಾ ಕಾಗದವು ರೂ.500/- ಗಳ ಬೆಲೆಯದ್ದು ಎಂದು ನುಡಿದಿರುತ್ತಾರೆ. ಛಾಪಾ ಕಾಗದ ತಂದ ದಿನ ಅದರಲ್ಲಿ ಯಾವುದೇ ಬರವಣಿಗೆ ಇರಲಿಲ್ಲ ಎಂದರೆ ಸರಿಯಲ್ಲ.

ದಿಃ14.08.2011 ರಂದು ಭೋಗ್ಯದ ಹಣವನ್ನು ಹಿಂತಿರುಗಿಸಿರುತ್ತಾರೆ ಎಂದರೆ ಸರಿಯಲ್ಲ. ಆ ಸಂದರ್ಭದಲ್ಲಿ ಛಾಪಾ ಕಾಗದವನ್ನು ಹಿಂತಿರುಗಿಸಿಲು ಹಲವಾರು ಬಾರಿ ಕೇಳಿರುತ್ತಾರೆ ಎಂದರೆ ಸರಿಯಲ್ಲ. ಭೋಗ್ಯದ ಪತ್ರವು ಕಳೆದುಹೋಗಿದೆ ಎಂದು ಹೇಳಿರುತ್ತೇನೆ ಎಂದರೆ ಸರಿಯಲ್ಲ. ಬೆಳಗ್ಗೆ 8.00 ರಿಂದ 9.00 ಗಂಟೆ ಸಮಯದಲ್ಲಿ ಮಾತುಕತೆ ಮುಗಿಸಿ, ಮಧ್ಯಾಹ್ನ ಸುಮಾರು 12.00 ಗಂಟೆ ಸಮಯದಲ್ಲಿ ಹೊಸದುರ್ಗಕ್ಕೆ ಬಂದು ಛಾಪಾ ಕಾಗದವನ್ನು ತೆಗೆಯಕೊಂಡು ಗಣಪತಿ ದೇವಸ್ಥಾನದ ಬಳಿ ವ್ಯವಹಾರವನ್ನು ಮುಗಿಸಿರುತ್ತೇವೆ. ಊರಿನಲ್ಲಿ ಮಾತುಕತೆ ಮಾಡುವ ಸಂದರ್ಭದಲ್ಲಿ ಮುದ್ದಹನುಮಪ್ಪ, ಕೃಷ್ಣಮೂರ್ತಿ, ಭೀಮಪ್ಪ, ಬಸವರಾಜು, ಜಯಮ್ಮ ಬಸವರಾಜು, ಧರ್ಮರಾಜ ಮತ್ತು ಸರೋಜಮ್ಮ ಎಂಬುವರು ಇದ್ದರು. ಮಾತುಕತೆ ಮುಗಿಸಿ ಬೆಳಗ್ಗೆ ಸುಮಾರು 10.30 ಸಮಯಕ್ಕೆ ಹೊಸದುರ್ಗಕ್ಕೆ ಬಂದೆವು. ಆ ಸಂದರ್ಭದಲ್ಲಿ ವೆಂಕಟೇಶ್ ಎಂಬುವರು ಇರಲಿಲ್ಲ.

(ಮುಂದುವರೆದ ಪಾಟೀ ಸವಾಲಿಗಾಗಿ ಪ್ರತಿವಾದಿ ಪರ ವಕೀಲರು ಕಾಲಾವಕಾಶ ಕೋರಿದ್ದರಿಂದ, ಕಾಲಾವಕಾಶ ನೀಡಿ ಮುಂದೂಡಲಾಯಿತು).

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ

ಅಪರ ಸಿವಿಲ್ ಮತ್ತು ಜೆ ಎಂ ಎಫ್ ಸಿ
ನ್ಯಾಯಾಧೀಶರು, ಹೊಸದುರ್ಗ.